ಮಾರ್ಚ್ 1

ಎಲ್ಲಾ ಗ್ರಹಿಕೆಯನ್ನು ಮೀರುವ ದೇವ ಶಾಂತಿಯು ನಿಮ್ಮ ಹೃದಯಗಳನ್ನೂ, ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವುದು. -ಫಿಲಿಪ್ಪಿ 4:7

ನಮ್ಮಲ್ಲಿರುವ ಶಾಂತಿಯನ್ನು ಕುರಿತು ಇಲ್ಲಿ ಉಲ್ಲೇಖಿಸಿಲ್ಲ. ಅದು ದೇವರ ಶಾಂತಿ. ನಾವು ದೇವರನ್ನು ಆತನ ಶಕ್ತಿಯನ್ನು ಒಳ್ಳೆಯತನ ಮತ್ತು ನಮ್ಮನ್ನು ತನ್ನ ಮಕ್ಕಳಂತೆ ಅಪ್ಪಿಕೊಂಡಿರುವದನ್ನು ತಿಳಿಯುವಂತೆ ನಮಗೆ ಒದಗಿ ಬಂದಿರುವ ಶಾಂತಿಯೇ ಆಗಿದೆ. ಇದರಲ್ಲಿ ಅಡಕವಾಗಿರುವ ಅರ್ಥವೇನಂದರೆ ನಮಗೆ ಪ್ರತಿಕೂಲವಾಗಿ ಸಂಭವಿಸುವ ಘಟನೆಗಳು ಹಾಗೂ ಅದರೊಂದಿಗೆ ಅಂಟಿಕೊಂಡಿರುವ ಭಯ ನಮ್ಮ ಮೇಲೆ ಬಂದೆರುಗುವಾಗ ದೇವರ ಶಾಂತಿ ನಮ್ಮನ್ನು ಅಂತಹ ಕಠಿಣ ಸಂದರ್ಭಗಳಲ್ಲೂ ಮತ್ತು ಎಲ್ಲಾ ಸಂದರ್ಭಗಳಲ್ಲಿಯೂ ಕಾಯುವ ಆಳಿನಂತಿರುವುದು. ಕ್ರಿಸ್ತ ಭಕ್ತನ ಮನಸ್ಸನ್ನು ಕಾಯುವದರಿಂದ ಅವನ ಹೃದಯ ಕರ್ತನ ಶಾಂತಿಯಲ್ಲಿ ನೆಲೆಗೊಂಡಿರುವದಲ್ಲದೆ, ಕರ್ತನ ಸಹವಾಸ, ಅನ್ಯೋನ್ಯತೆ ಮತ್ತು ಆತನ ಮನಸ್ಸಿನ ಆಲೋಚನಾ ಶಕ್ತಿಯಿಯು ದೇವರ ಪ್ರೀತಿ, ಶಕ್ತಿ ಮತ್ತು ಜ್ಞಾನವನ್ನು ತಿಳಿಯುವಂತೆ ಮಾಡುವ ಭರವಸೆ ಕೊಡುವದಾಗಿದೆ-Z ’03, 8 (ಖ 3128).

*** *** ***

ಮಾರ್ಚ್ 2

ಯಾವಾವದು ಸತ್ಯವೂ, ಮಾನ್ಯವೂ; ಯಾವದು ಕೀರ್ತಿಗೆ ಯೋಗ್ಯವೂ ಆಗಿದೆಯೋ ಅವೆಲ್ಲವುಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳಿರಿ. -ಫಿಲಿಪ್ಪಿ 4:8

ಯಾರು ಅಸತ್ಯವನ್ನು ಉತ್ಪ್ರೇಕ್ಷಿಸಿ ಅದರ ಬಗ್ಗೆ ಅನುಕಂಪವನ್ನು ತೋರಿಸುತ್ತಾನೋ, ಅಂಥವನು ತನ್ನನ್ನು ತಾನೆ ಮಲಿನಗೊಳಿಸಿಕೊಳ್ಳುವನು. ಯಾರು ತನ್ನ ಆಲೋಚನೆಗಳನ್ನು ಶುದ್ಧವಾಗಿಟ್ಟು ಉತ್ಪ್ರೇಕ್ಷೆಯನ್ನು ವಿಸರ್ಜಿಸಿರುತ್ತಾನೊ ಅಂಥವನ ಮನಸ್ಸು ಹಾಗೂ ಅವನ ಗುಣ ಅಷ್ಟರಮಟ್ಟಿಗೆ ಶುದ್ಧವಾಗಿರುತ್ತೆ. ಅಥವ ನಮಗೆ ತಿಳಿದಿರುವ ಸತ್ಯಸಂಗತಿಗಳಲ್ಲೇ ತೃಪ್ತಿಪಡುವುದು ಸರಿಯೋ? ಇಲ್ಲ ನಾವು ಅವುಗಳನ್ನು ಪರೀಕ್ಷಿಸಿ ಅದು ಎಷ್ಟರಮಟ್ಟಿಗೆ ಮಾನ್ಯವೂ ಶುದ್ಧವೂ ನಂಬಿಕೆಗೆ ಯೋಗ್ಯವಾಗಿದೆಯೋ ಎಂಬುದನ್ನು ಒರೆ ಹಚ್ಚಿ ತಿಳಿಯಬೇಕು. ಕರ್ತನು ನಮ್ಮಲ್ಲಿ ವಂಶಪಾರಂಪರ್ಯವಾಗಿ ಅಂಟಿಕೊಂಡು ಬಂದಿರುವ ಅಶುದ್ಧ ಹಾಗೂ ಕೀಳು ಮಟ್ಟದ ಗುಣಗಳನ್ನು ಮುಚ್ಚಿಹಾಕಿದ್ದರೂ ಹಾಗೂ ತಾನು ನಮಗಾಗಿ ಕೊಟ್ಟಿರುವ ಈಡಿನಿಂದ ಕೊನೆಯವರೆಗೂ ಮುಂದುವರಿಸಿದ್ದಾಗ್ಯೂ ನಾವು ಬಿದ್ದುಹೋಗಿರುವ ಸ್ಥಿತಿಯ ಬಗ್ಗೆ ಅನುಕಂಪ ಉಳ್ಳವರಾಗಿರದೆ, ನಮ್ಮ ಹೃದಯಲ್ಲಿ ಸತ್ಯವೂ, ಮಾನ್ಯವೂ ಆಗಿರುವ ವಿಷಯಗಳು ಸದಾಕಾಲ ಉನ್ನತ ಮಟ್ಟದಲ್ಲಿ ನಮ್ಮ ಹೃದಯದ ಆಲೋಚನೆಯಾಗಿದ್ದು, ದೇವರೊಂದಿಗೂ ಸಹೋದರರೊಂದಿಗೂ ನಮ್ಮ ಎಲ್ಲಾ ನಡವಳಿಗಳು ಕ್ರಿಯಾತ್ಮಕವಾಗಿರುವುದು ಸೂಕ್ತ-Z ’03, 9 (ಖ 3129).

*** *** ***

ಮಾರ್ಚ್ 3

ಯಾವುದು ನ್ಯಾಯವಾಗಿದೆಯೋ ......... ಅವೆಲ್ಲವುಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಿರಿ.

-ಫಿಲಿಪ್ಪಿ 4:8

ನಾವು ನಮ್ಮ ಮನಸ್ಸನ್ನು ಅನ್ಯಾಯದ ಕಡೆ ಹರಿಸದೆ, ನಮ್ಮ ಎಲ್ಲಾ ಯೋಚನೆಗಳು, ಮಾತುಗಳು ಕ್ರಿಯೆಗಳಿಗೆ ಅನ್ವಯಿಸುವದಕ್ಕೆ ಕಲಿಯಬೇಕು. ಹಾಗೆಯೇ ಇತರರ ವಿಷಯದಲ್ಲಿ ನಮ್ಮ ನಡವಳಿಕೆ ಬೇರೆ ರೀತಿಯಲ್ಲಿರಬೇಕು. ಅಂದರೆ, ಕರುಣೆ, ಕ್ಷಮಿಸುವುದು, ಸಹಾನುಭೂತಿ ತೋರಿಸುವುದು ಹಾಗೆ ಸಹಾಯ ಮಾಡುವಂತಿದ್ದು, ಇವುಗಳನ್ನು ಜೊತೆಯಲ್ಲೇ ಕಲಿಯಬೇಕಾಗಿದೆ. ನಾವು ಅಂಗೀಕರಿಸುವ ಪ್ರತಿಯೊಂದು ವಿಷಯ, ಉದ್ದೇಶ, ಯೋಚನೆಯನ್ನು ತೀಕ್ಷಣವಾಗಿ ಹಾಗೂ ಕಟುವಾಗಿ ವಿಮರ್ಶಿಸದೆ ನ್ಯಾಯಕ್ಕೆ ಅಪಚಾರವಾಗದಂತೆಯೂ ನಮ್ಮ ಮನಸ್ಸಾಕ್ಷಿಗೆ ವಿರುದ್ಧವಾಗಿರದಂತೆಯೂ ವಿಮರ್ಶಿಸಿ ವರ್ತಿಸಬೇಕು-Z ’03, 9 (ಖ 3129).

*** *** ***

ಮಾರ್ಚ್ 4

ಯಾವುದು ಶುದ್ಧವೂ, ಪ್ರೀತಿಕರವೂ, ಮನೋಹರವೂ ಆಗಿದೆಯೋ ...... ಅವೆಲ್ಲವುಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳಿರಿ. -ಫಿಲಿಪ್ಪಿ 4:8

ಯಾವುದು ಶುದ್ಧವಾಗಿದೆಯೋ ಅದನ್ನು ಎಷ್ಟರಮಟ್ಟಿಗೆ ಪ್ರೀತಿಸಬೇಕೆಂದರೆ, ಅಶುದ್ಧವು ನಮ್ಮನ್ನು ಹಿಂಸಿಸುವಂತದ್ದಾಗಿಯೂ, ಯಾತನೆಯೊಳ್ಳದ್ದಾಗಿಯೂ ನಮಗೆ ಕಂಡುಬಂದು ಅದನ್ನು ನಮ್ಮ ಗಮನದಿಂದ ಅಥವ ನೆನಪಿನಿಂದ ಬಿಟ್ಟುಬಿಡುವಂತಾಗಬೇಕು. ಇದನ್ನು ಸಾಧಿಸಬೇಕಾದರೆ, ನಾವು ಯಾವಾಗಲು ಶುದ್ಧ ವಿಚಾರಗಳನ್ನೇ ಲಕ್ಷ್ಯಕ್ಕೆ ತಂದುಕೊಂಡು ಅಶುದ್ಧ ವಿಷಯಗಳನ್ನು ಯೋಚಿಸುವುದನ್ನು ತೊರೆಯಬೇಕು. ನಾವು ಯಾವುದು ಮನೋಹರವೂ, ಪ್ರೀತಿಪೂರ್ವಕವಾಗಿರುವದೋ ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು. ಯಾವಾಗ ನಾವು ಶುದ್ಧ ವಿಚಾರಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳುತ್ತೇವೆಯೋ ಆಗ ನಮ್ಮ ಮನಸ್ಸು ಹೃದಯ, ದೇವರ ಮತ್ತು ನಮ್ಮ ಕರ್ತನಾದ ಕ್ರಿಸ್ತೇಸುವಿನಲ್ಲಿ ತುಂಬಿತುಳುಕುತ್ತಿರುವ ಪ್ರೀತಿಯನ್ನು ತಿಳಿಯಲು ಸಾಧ್ಯವಾಗುತ್ತೆ ಹಾಗೂ ಇದಕ್ಕನುಗುಣವಾಗಿ ಕ್ರಿಸ್ತನೊಂದಿಗೆ ನಡೆಯುತ್ತಿರುವ ಸಹೋದರನಲ್ಲಿಯೂ ಕಾಣಬಹುದಾಗಿದೆ-Z ’03, 9 (ಖ 3129).

*** *** ***

ಮಾರ್ಚ್ 5

ಯಾವದು ಸದ್ಗುಣವಾಗಿದೆಯೋ, ಯಾವದು ಕೀರ್ತಿಗೆ ಯೋಗ್ಯವೋ, ಅವೆಲ್ಲವುಗಳನ್ನು ಲಕ್ಷ್ಯಕ್ಕೆ ತಂದಿಕೊಳ್ಳಿರಿ. -ಫಿಲಿಪ್ಪಿ 4:8

ಸದ್ಗುಣ ಬೆಲೆಯುಳ್ಳದ್ದು ಹಾಗೂ ಪ್ರಶಂಸೆಗೆ ಯೋಗ್ಯವಾದದ್ದು. ಅಂದರೆ, ಗೌರವಾನ್ವಿತ ಪದಗಳು ಅಥವ ಗೌರವಾನ್ವಿತ ಕ್ರಿಯೆಗಳು ಅಥವ ಗೌರವಾನ್ವಿತ ಭಾವನೆಗಳನ್ನು ವ್ಯಕ್ತಪಡಿಸುವ ಯಾವ ಮನುಷ್ಯನೇ ಆಗಲಿ ನಾವು ಅವುಗಳನ್ನು ಧ್ಯಾನ ಮಾಡಬಹುದು. ಇದರಿಂದಾಗಿ ನಾವು ನಮ್ಮ ಮನಸ್ಸು, ನಮ್ಮ ಹೊಸ ಹೃದಯ, ಚಿತ್ತ ಇವುಗಳು ಆ ಒಳ್ಳೆಯ ಭಾವನೆಗಳನ್ನು ಆಧಾರವಾಗಿಟ್ಟುಕೊಂಡು ವೃದ್ಧಿಯಾಗಬಹುದಾಗಿದೆ. ಹೀಗೆ ನಾವು ನಮ್ಮ ಮನಸ್ಸುಗಳನ್ನು ನವೀಕರಿಸುತ್ತಾ ಮಹಿಮೆಯುಳ್ಳ ನಮ್ಮ ನಾಯಕನಾದ ಕರ್ತನನ್ನು ಸ್ಪಂದಿಸುತ್ತಾ ಆತನಂತೆಯೇ ಪರಿವರ್ತಿತರಾಗಿ ಈಗಿನ ಜೀವನದಲ್ಲಿ ಸ್ವಲ್ಪ ಸ್ವಲ್ಪವಾಗಿ ಒಂದೊಂದೇ ಹೆಜ್ಜೆಯನ್ನಿಡುತ್ತಾ ಮಹಿಮೆಯಿಂದ ಮಹಿಮೆಗೆ ಮುಂದುವರಿಯಲು ನಮ್ಮ ಯೋಚನೆಗಳನ್ನು, ನಮ್ಮ ಆಂತರಿಕ ಭಾವನೆಗಳನ್ನು ಕರ್ತನಲ್ಲಿ ನೆಲೆಗೊಳ್ಳುವಂತೆ ಮಾಡಿ ಆತನಲ್ಲಿದ್ದುಕೊಂಡು ಮುಂದುವರಿಯುವದಾದರೆ, ನೀತಿವಂತರಿಗೆ ದೊರಕುವ ಪುನರುತ್ಥಾನದಲ್ಲಿ ನಮ್ಮ ಕರ್ತನಂತೆ ಪರಿಪೂರ್ಣ ಮಟ್ಟವನ್ನು ತಲುಪಿ ಆತನ ಹಾಗೆ ಆಗುವೆವು-Z 03, 9 (ಖ 3129).

*** *** ***

ಮಾರ್ಚ್ 6

ನಾನಂತೂ ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿರುವದನ್ನು ಕಲಿತುಕೊಂಡಿದ್ದೇನೆ. ಬಡವನಾಗಿರಲೂ ಬಲ್ಲೆನು? ಸಮೃದ್ಧಿಯುಳ್ಳವನಾಗಿರಲೂ ಬಲ್ಲೆನು. -ಫಿಲಿಪ್ಪಿ 4:11,12

ನಮ್ಮ ಜೀವನದ ಅನುಭವಗಳು ಬರಿ ಪರೀಕ್ಷೆಗಳಿಂದಲೇ ತುಂಬಿರುವದಾದರೆ, ನಾವು ತಿಳುಕೊಳ್ಳಬೇಕಾಗಿರುವದು ಯಾವದೆಂದರೆ, ನಾವು ನಮ್ಮ ಜೀವನದಲ್ಲಿ ಉನ್ನತ ಮಟ್ಟದಲ್ಲಿ ಅನುಕೂಲಕರವಾದ ಸ್ಥಿತಿ ಅಥವ ಅನಾನುಕೂಲಕರವಾದ ಸ್ಥಿತಿಯಿಂದಾಗುವ ಅನುಭವಗಳ ಮೂಲಕ ಕರ್ತನು ಭವಿಷ್ಯದಲ್ಲಿ ರೂಪಿಸುವ ಸ್ಥಾನ ಹೊಂದಲು ಯೋಗ್ಯರಾಗಲು ಶಿಕ್ಷಣವನ್ನು ಕೊಡುವವನಾಗಿದ್ದಾನೆ ಎಂಬುದಾಗಿದೆ. ಹೀಗಿರುವಲ್ಲಿ ಅಪೋಸ್ತಲನು ತನ್ನ ಅನುಭವವನ್ನು ತೋಡಿಕೊಂಡಂತೆ ಸಮೃದ್ಧಿಯುಳ್ಳವನಾಗಿದ್ದಾಗ ನಾವು ದೇವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಾತ್ಸಾರ ಮಾಡದೆ, ಅಥವ ಮರೆಯದೆ ಹಾಗೆಯೇ ಬಡತನ ಬಂದಾಗ ಗೊಣಗುಟ್ಟದೆ ಕರ್ತನು ತನ್ನ ಚಿತ್ತದಂತೆ ನಮ್ಮನ್ನು ಯಾವ ಸ್ಥಿತಿಯಲ್ಲಿಟ್ಟಿರುತ್ತಾನೋ, ಅದರಲ್ಲೇ ತೃಪ್ತಿಪಡಬೇಕು-Z '03, 10 (ಖ 3129).

*** *** ***

ಮಾರ್ಚ್ 7

ನಾವು ಒಬ್ಬರನ್ನೊಬ್ಬರು ಪ್ರೀತಿಸಿದರೆ, ದೇವರು ನಮ್ಮಲ್ಲಿ ನೆಲೆಗೊಂಡಿದ್ದಾನೆ ಮತ್ತು ಆತನಿಂದಾಗುವ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುತ್ತದೆ. -1ಯೋಹಾನ 4:12

ನಾನು ದೇವರ ದೃಷ್ಟಿಯಲ್ಲಿ ಏನಾಗಿರುವೆನೋ ಅಥವಾ ಏನು ಇಲ್ಲದವನಾಗಿರುವೆನೋ ಎಂಬುದನ್ನು ನಿರ್ಧರಿಸಲು ನನ್ನಲ್ಲಿ ದೇವರ ಬಗ್ಗೆ ನನ್ನ ಸಹೋದರರ ಬಗ್ಗೆ ಆತನ ನಿಮಿತ್ತ ಲೋಕದವರು ಹಾಗೂ ನನ್ನ ವೈರಿಗಳ ಮೇಲೆ ನನಗಿರುವ ಪ್ರೀತಿಯು ನಿಗದಿಪಡುತ್ತದೆಯೇ ವಿನಃ ನನ್ನ ವಾಕ್ಚಾತುರ್ಯವಾಗಲಿ, ನನ್ನಲ್ಲಿರುವ ಜ್ಞಾನ ಹಾಗೂ ನನ್ನ ಕೀರ್ತಿಯಾಗಲಿ ಅಲ್ಲ. ನಮ್ಮ ಗುಣವನ್ನು, ನಡವಳಿಕೆಯನ್ನು ಅಳೆಯಬೇಕಾದರೆ, ಹಾಗೂ ದೇವರಿಗೆ ನಾವು ಹತ್ತಿರವಾಗಿರುವುದಾಗಲಿ ಆತನ ಅನುಮೋದನೆಗೆ ಪಾತ್ರರಾಗಿರುವುದಾಗಲಿ ತಿಳಿಯಬೇಕಾದರೆ ಪ್ರೀತಿಯನ್ನು ಮುಂದಿಟ್ಟು ಒರೆಹಚ್ಚಬೇಕು. ಪವಿತ್ರಾತ್ಮನನ್ನು ಹೊಂದಿರುವ ಪ್ರತಿಯೊಬ್ಬನು ಮೃದು ಸ್ವಭಾವವುಳ್ಳವನಾಗಿರಬೇಕು. ಪ್ರೀತಿಯನ್ನು ಬಿಟ್ಟು ಬೇರೆ ಇನ್ನಾವ ವಿಧದಲ್ಲಿಯೂ ದೇವರು ನಮ್ಮನ್ನು ಕತ್ತಲೆಯಿಂದ ತನ್ನ ಆಶ್ಚರ್ಯಕರವಾದ ಬೆಳಕಿಗೆ ಕರೆದಿರುವದನ್ನು ನಾವು ಕೊಂಡಾಡಲು ಹಾಗೂ ನಮ್ಮ ದಿನನಿತ್ಯದ ಜೀವನದಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ-Z ’03, 56, 57 (ಖ 3150).

*** *** ***

ಮಾರ್ಚ್ 8

ಆದರೆ, ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ. -1ಕೊರಿಂಥ 12:18

ಕ್ರಿಸ್ತನ ದೇಹಕ್ಕೆ ಸೇರಿರುವ ಯಾವ ಸದಸ್ಯನಾಗಲಿ ನನಗೆ ಮತ್ತೊಬ್ಬ ಸದಸ್ಯನ ಅವಶ್ಯಕತೆ ಇಲ್ಲ ಎಂಬುದಾಗಿ ಹೇಳಲು ಸಾಧ್ಯವಿಲ್ಲ. ಈ ದೇಹದಲ್ಲಿ ನಾನು ಸೇವೆ ಮಾಡುವಂಥ ಯಾವುದು ಇಲ್ಲ ಎಂಬುದಾಗಿಯೂ ಹೇಳಲಾಗದು. ನಮ್ಮ ಮಹಿಮೆಯುಳ್ಳ ನಾಯಕನ ಅಡಿಯಲ್ಲಿ ಆತನ ಆತ್ಮದಿಂದ ತುಂಬಿರುವ ಸದಸ್ಯನು ಕರ್ತನ ಮಾರ್ಗದರ್ಶನದಲ್ಲಿ ತಾನು ಮಾಡಬೇಕಾದ ಸೇವೆಯನ್ನು ಮಾಡಬಹುದು. ಬಹುಮಾನ ಕೊಡುವ ಸಮಯ ಬಂದಾಗ ಯಾರಿಗೆ ಗೊತ್ತು, ಅಕ್ವಿಲ್ಲ ಹಾಗೂ ಪ್ರಿಸ್ಕಿಲರು ಪೌಲ ಹಾಗೂ ಅಪೋಲ್ಲೊಸರ ಪರವಾಗಿ ನಾನಾ ರೀತಿಯಲ್ಲಿ ಸೇವೆ ಮಾಡಿ ಕರ್ತನ ಪ್ರಿಯ ಸೇವಕರಾದ ಇವರನ್ನು ಎಲ್ಲಾ ವಿಧದಲ್ಲಿ ಪ್ರೋತ್ಸಾಹಿಸಿ, ಉತ್ತೇಜಿತರಾಗುವಂತೆ ಮಾಡಿದ ಇಂಥಹ ವಿನಯ ಸಂಪನ್ನರಿಗೆ ದೇವರು ದಯಪಾಲಿಸದೆ ಇರುವನೆ?-Z ’03, 59 (ಖ 3152).

*** *** ***

ಮಾರ್ಚ್ 9

ನೀವು ದೇವ ಜನರಿಗೆ ಉಪಚಾರ ಮಾಡಿದಿರಿ. ಇನ್ನೂ ಮಾಡುತ್ತಾ ಇದ್ದೀರಿ. ಈ ಕೆಲಸವನ್ನು ಇದರಲ್ಲಿ ನೀವು ದೇವರ ನಾಮದ ವಿಷಯವಾಗಿ ತೋರಿದ ಪ್ರೀತಿಯನ್ನೂ ಆತನು ಮರೆಯುವದಕ್ಕೆ ಅನ್ಯಾಯಸ್ಥನಲ್ಲ. -ಇಬ್ರಿಯ 6:10

ಈಗಿನ ಸುಗ್ಗಿಯಲ್ಲಿ ದಿನನಿತ್ಯ ಕರ್ತನ ಸೇವೆ ಮಾಡುವುದರಲ್ಲಿ ಹಾಗೂ ಸಹಕಾರ ನೀಡುವುದರಲ್ಲಿ ಒದಗಿ ಬರುವ ಸುವರ್ಣ ಅವಕಾಶವನ್ನು ದೇವರ ಮಕ್ಕಳು ಕಳಕೊಳ್ಳುವುದಕ್ಕೆ ಇಚ್ಛಿಸುವುದಿಲ್ಲ. ಪ್ರತಿ ದಿವಸ ರಾಜ ಧ್ವಜವನ್ನು ತಾನೆ ಎತ್ತಿ ಹಿಡಿದು, ದೇವರು ತನ್ನನ್ನು ಕತ್ತಲೆಯಿಂದ ಬೆಳಕಿಗೆ ಕರೆದಿರುವದನ್ನು ಸಾರ್ವಜನಿಕರ ಮುಂದೆ ಕೊಂಡಾಡಲು ಹಾಗೂ ದೇವರು ತನ್ನ ಸಂಕಲ್ಪಾನುಸಾರ ಸಾರ್ವಜನಿಕ ಸೇವೆ ಮಾಡಲು ಅನುಕೂಲಕರವಾದ ಸ್ಥಾನದಲ್ಲಿ ನೇಮಿಸಿರುವ ಸಹೋದರರಿಗೆ ಪ್ರೀತಿಪೂರ್ವಕ ಸಹಾಯ ಹಸ್ತ ನೀಡಿ, ಅವರೊಂದಿಗೆ ಸಹಕರಿಸಿ ಮಾಡುವ ಸೇವೆಯನ್ನು ದೇವರು ಎಂದಿಗೂ ತಿರಸ್ಕರಿಸುವುದಿಲ್ಲ-Z ’03, 59 (ಖ 3152).

*** *** ***

ಮಾರ್ಚ್ 10

ನಿಮ್ಮಲ್ಲಿ ಒಬ್ಬನಾದರೂ ಪಾಪದಿಂದ ಮೋಸಹೋಗಿ ಕಠಿಣರಾಗದಂತೆ ಈ ಹೊತ್ತು ಎಂಬ ಕಾಲವು ಇರುವ ತನಕ ಪ್ರತಿ ನಿತ್ಯವೂ ಒಬ್ಬರನ್ನೊಬ್ಬರು ಎಚ್ಚರಿಸಿರಿ. -ಇಬ್ರಿಯ 3:13

ನಮಗೆ ಗೊತ್ತಾಗದ ರೀತಿಯಲ್ಲಿ ಆತ್ಮೀಕ ಸೋಮಾರಿತನ ನಮ್ಮನ್ನು ನಿಧಾನವಾಗಿ ಆವರಿಸುತ್ತಾ ನಮ್ಮಲ್ಲಿರುವ ಸತ್ಯವು ತನ್ನ ಪ್ರೇರಣಾ ಶಕ್ತಿಯನ್ನು ಕಳಕೊಳ್ಳುತ್ತಿರುವುದು ನಮಗೆ ಗೊತ್ತಾದ ತಕ್ಷಣವೇ ಮೊದಲು ನಾವು ಮಾಡಬೇಕಾದ ಕರ್ತವ್ಯವೇನಂದರೆ, ದೇವರನ್ನು ಹಾಗೂ ಶುದ್ಧೀಕರಿಸುವ ಶಕ್ತಿಯನ್ನು ಹೊಂದಿರುವ ಆತನ ವಾಕ್ಯವನ್ನು ಆಧಾರ ಮಾಡಿಕೊಂಡು ಪ್ರಾರ್ಥನೆಯ ಮೂಲಕ ಸಂಪರ್ಕಿಸಬೇಕು. ಯಾಕಂದರೆ, ಮೊದಲಿನಿಂದಿರುವ ಭರವಸೆಯನ್ನು ಅಂತ್ಯದವರೆಗೂ ದೃಢವಾಗಿ ಹಿಡಿದುಕೊಳ್ಳುವ ಪಕ್ಷಕ್ಕೆ ಕ್ರಿಸ್ತನಲ್ಲಿ ಪಾಲುಗಾರರಾಗಿದ್ದೇವಲ್ಲಾ. (ಇಬ್ರಿಯ 3:14)

*** *** ***

ಮಾರ್ಚ್ 11

ಆದಕಾರಣ ಇಷ್ಟು ಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲು ಇರುವದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನು ಹತ್ತಿಕೊಳ್ಳುವ ಪಾಪವನ್ನು ನಾವು ಸಹ ತೆಗೆದಿಟ್ಟು .................... ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ.

-ಇಬ್ರಿಯ 12:1

ಯೆಹೋವ ದೇವರು ಯಾವ ಬಹುಮಾನವನ್ನು ಕೊಡಲು ನಿಮ್ಮನ್ನು ಕರೆದಿರುವನೋ ಆ ಬಹುಮಾನವನ್ನು ಪಡೆಯಲು ನೀವು ನಿಶ್ಚಿತವಾದ ಗುರಿಯುಳ್ಳವರಾಗಿ, ಆ ಗುರಿಯನ್ನು ತಲುಪಲು ನಿಮ್ಮ ಮನಸ್ಸಿನ ನಡುವನ್ನು ಕಟ್ಟಿಕೊಂಡು ನಿಮ್ಮ ಪ್ರಯತ್ನವನ್ನು ಬಲಗೊಳಿಸುತ್ತಾ, ನಿಮ್ಮ ದೃಢ ಸಂಕಲ್ಪವನ್ನು ನವೀಕರಿಸಿ, ಶ್ರಮಶೀಲತೆಯನ್ನು ಎರಡರಷ್ಟು ಹೆಚ್ಚಿಸಿ ಅನುಪಯುಕ್ತವಾದ ಲೋಕದ ಆಶೆ ಆಕಾಂಕ್ಷೆಗಳನ್ನು ಬದಿಗಿಟ್ಟು, ನಿಮ್ಮ ಆಸಕ್ತಿಯನ್ನು ಹೆಚ್ಚಿಸಿಕೊಂಡು ನಮಗೆ ನೇಮಕವಾಗಿರುವ ಓಟವನ್ನು ಅಪೋಸ್ತಲನು ಒತ್ತಾಯಿಸುವಂತೆ ತಾಳ್ಮೆಯಿಂದಲೂ ಎಚ್ಚರಿಕೆಯಿಂದಲೂ ಓಡಿರಿ. ಗಾಳಿಯನ್ನು ಗುದ್ದಾಡುವವನಂತೆ ಓಡದೆ ಒಂದು ನಿಗದಿತವಾದ ಉದ್ದೇಶವನ್ನಿಟ್ಟು ಅದಕ್ಕಾಗಿ ಪ್ರಯಾಸಪಡುತ್ತಾ ದೇವರು ನಿಮ್ಮನ್ನು ಯಾವ ಉದ್ದೇಶಕ್ಕಾಗಿ ಕರೆದಿರುವನೋ ಆ ಉದ್ದೇಶವನ್ನು ಹಾಗೂ ಬಹುಮಾನವನ್ನು ಪಡೆಯಲು ಓಡಿರಿ-Z ’03, 54 (ಖ 3149).

*** *** ***

ಮಾರ್ಚ್ 12

ಶುದ್ದ ಹೃದಯ, ಒಳ್ಳೇ ಮನಸ್ಸಾಕ್ಷಿ, ನಿಷ್ಕಪಟವಾದ ನಂಬಿಕೆ ಎಂಬವುಗಳಿಂದ ಹುಟ್ಟಿದ ಪ್ರೀತಿಯೇ ದೇವ ವಾಕ್ಯೋಪದೇಶದ ಗುರಿಯಾಗಿದೆ. -1ತಿಮೋಥಿ 1:5

ನಮ್ಮ ಮನೋನೇತ್ರಗಳ ಮುಂದೆ ದೇವರು ನಮ್ಮ ಕೂಡ ಇಟ್ಟಿರುವ ನಿಕಟ ಸಂಬಂಧ ಮತ್ತು ನಮಗೋಸ್ಕರ ಮಾಡಿರುವ ದೈವ ವಾಗ್ದಾನಗಳು ಇವೆಲ್ಲವುಗಳ ಅಂತಿಮ ಉದ್ದೇಶ ಏನಂದರೆ, ನಾವು ಪ್ರೀತಿಯನ್ನು ಅಭ್ಯಾಸ ಮಾಡುವದಲ್ಲದೆ, ವೃದ್ಧಿಪಡಿಸುವದಾಗಿದೆ. ಯಾಕಂದರೆ, ದೇವರು ಪ್ರೀತಿ ಸ್ವರೂಪಿ. ಈ ಪ್ರೀತಿಯಲ್ಲಿದ್ದು, ಕರ್ತನು ನೇಮಿಸಿರುವ ಪ್ರಮಾಣಕ್ಕನುಗುಣವಾಗಿ ವೃದ್ಧಿಪಡಿಸಬೇಕಾದರೆ, ಆ ಪ್ರೀತಿಯು ಶುದ್ದ ಹೃದಯದಿಂದ ಹೊರಹೊಮ್ಮಬೇಕಾಗಿದೆ ಮತ್ತು ಕರ್ತನು ಹಾಗೂ ಆತನ ಪ್ರೀತಿಯ ನಿಯಮಕ್ಕನುಸಾರವಾಗಿರುವದಲ್ಲದೆ, ನಮ್ಮ ವೈರಿಯಾದ ಸೈತಾನ ಹಾಗೂ ಸ್ವಾರ್ಥತೆಗೆ ವಿರುದ್ದವಾಗಿರಬೇಕು-Z ’00, 360 (ಖ 2733).

*** *** ***

ಮಾರ್ಚ್ 13

ನಮ್ಮಲ್ಲಿ ಪ್ರವೀಣರಾದವರು ಇದೇ ಅಭಿಪ್ರಾಯವುಳ್ಳವರಾಗಿರೋಣ. ಯಾವದಾದರೂ ಒಂದು ವಿಷಯದಲ್ಲಿ ನೀವು ಬೇರೆ ಅಭಿಪ್ರಾಯವುಳ್ಳವರಾಗಿದ್ದರೆ, ಅದನ್ನೂ ದೇವರು ನಿಮಗೆ ತೋರಿಸಿಕೊಡುವನು. ಆದರೆ, ನಾವು ಯಾವ ಸೂತ್ರವನ್ನನುಸರಿಸಿ ಇಲ್ಲಿಯವರೆಗೆ ಬಂದೆವೋ, ಅದನ್ನೇ ಅನುಸರಿಸಿ ನಡೆಯೋಣ. -ಫಿಲಿಪ್ಪಿ 3:15,16

ಯಾವನಾದರು ಪರಿಪೂರ್ಣ ಪ್ರೀತಿಯ ಗುರಿಯನ್ನು ತಲುಪಿರುವನಾದರೆ, ತನ್ನನ್ನೇ ಸಹೋದರ ಸೇವೆಯಲ್ಲಿ ಮತ್ತು ಕರ್ತನ ಸೇವೆಯಲ್ಲಿ ಅರ್ಪಿಸುವ ಹಂಗಿನಲ್ಲಿರುವನು. ಅಂಥವನು ದೇವರ ಮತ್ತು

ನೀತಿಸೂತ್ರಗಳ ಪ್ರತಿನಿಧಿಯಾಗಿರುವದಲ್ಲದೆ, ಕರ್ತನ ಶಕ್ತಿಯನ್ನು ಅವಲಂಬಿಸಿ ಆತನ ವಾಕ್ಯದ ನಂಬಿಕೆಯಲ್ಲಿ ದೃಢವಾಗಿದ್ದು, ಗುರಿಯನ್ನು ತಲುಪಲು ಪ್ರಯಾಸಪಡುವ ಇತರ ಸಹೋದರರನ್ನು ಮನಃಪೂರ್ವಕವಾಗಿಯೂ ಹೃದಯಪೂರ್ವಕವಾಗಿಯೂ ಆಸಕ್ತಿಯಿಂದ ಹುರಿದುಂಬಿಸಿ ಅವರ ಓಟದಲ್ಲಿ ಅವರು ಆ ಪ್ರಮಾಣವನ್ನ ತಲುಪುವಂತೆ ಪ್ರೋತ್ಸಾಹಿಸಬೇಕು-Z ’01, 10 (ಖ 2753).

***  ***  ***

ಮಾರ್ಚ್ 14

ದೀರ್ಘಶಾಂತನು ಶೂರನಿಗಿಂತಲೂ ಶ್ರೇಷ್ಠ; ತನ್ನನ್ನು ಆಳುವವನು ಪಟ್ಟಣವನ್ನು ಗೆದ್ದವನಿಗಿಂತಲೂ ಬಲಿಷ್ಠ. -ಜ್ಞಾನೋಕ್ತಿ 16:32

ನವiೆಮ ತಂದೆಯಾದ ದೇವರ ಪ್ರಿಯ ಕುಮಾರನ ಮಾದರಿಯಂತಾಗಲು ಪ್ರಯತ್ನಿಸುವವರÀು ಪ್ರಥಮವಾಗಿ ದ್ವೇಷ, ದುಷ್ಟಭಾವನೆ ಜಗಳ ಮತ್ತು ಅಸೂಯೆಗಳಿಂದ ಕೂಡಿರುವ ಕೋಪವನ್ನು ತ್ಯಜಿಸಬೇಕಾಗಿದೆ. ಆದರೆ, ಎಲ್ಲಾ ರೀತಿಯ ಪಾಪ ಮತ್ತು ತಪ್ಪುಗಳ ವಿರುದ್ಧ ನ್ಯಾಯವಾದ ಕೋಪವನ್ನು ವ್ಯಕ್ತಪಡಿಸವದು ತಪ್ಪಲ್ಲ. ಈ ನ್ಯಾಯವಾದ ಕೋಪವು ಪ್ರೀತಿಯುಳ್ಳದ್ದಾಗಿರಬೇಕು, ಮತ್ತು ಹಲವು ಸಂದರ್ಭಗಳಲ್ಲಿ ನೀತಿಯಿಂದ ಆಧಾರವಾಗಿರುವ ಕೋಪವನ್ನು ಉಪಯೋಗಿಸದಿದ್ದಲ್ಲಿ ಅದು ತಪ್ಪಾಗುತ್ತದೆ. Z ’96, 229 (ಖ2068)

***  ***  ***

ಮಾರ್ಚ್ 15

ನೀತಿವಂತನು ನಂಬಿಕೆಯಿಂದಲೇ ಬದುಕುವನು. -ಇಬ್ರಿಯ 10:38

ನಾವು ಪ್ರಥಮವಾಗಿ ನಂಬಿಕೆಯ ಮೂಲಕ ಜೀವವನ್ನು ಪಡೆದಿದ್ದೇವೆ ಎಂಬುದಾಗಿ ತಿಳಿದರೆ ಸಾಲದು. ನಾವು ಮರಣದಿಂದ ಜೀವಕ್ಕೆ ಸೇರಿದ್ದೇವೆ ಎಂಬುದನ್ನು ಅಂಗೀಕರಿಸಿದ ಮೇಲೆ, ನಮ್ಮ ಆತ್ಮೀಕ ಜೀವನದ ಬೆಳವಣಿಗೆಗೆ ಬೇಕಾಗಿರುವ ಆತ್ಮೀಕ ಪೋಷಣೆಯನ್ನು ಯಾವಾಗಲೂ ಹೊಂದುತ್ತಾ ನಂಬಿಕೆಯಲ್ಲಿ ಬೆಳೆಯುತ್ತಾ ದೇವರ ವಾಕ್ಯದ ಹಾಗೂ ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ನಂಬಿಕೆಯಿಂದ ನಡೆಯಲು ಸಾಧ್ಯವಾಗುತ್ತೆ. ನಂಬಿಕೆಯು ಜೀವನದ ವೈಯಕ್ತಿಕ ವಿಷಯವಾಗಿದೆ. ಹೃದಯ ಮತ್ತು ಮನಸ್ಸಿಗೆ ಸಂಬಂಧಿಸಿದ್ದು. ಅದು ನಾವು ಅಂಗೀಕರಿಸಿರುವ ಬೋಧನೆಗಳು ಸತ್ಯವಾಗಿವೆ ಮತ್ತು ದೈವೋಕ್ತಿಗಳ ಈ ಬೋಧನೆಗಳು ಸತ್ಯವಾಗಿವೆ ಎಂಬುದನ್ನು ನಾವು ರುಜುಪಡಿಸಿಕೊಂಡು ಅದನ್ನು ನಾವು ಜೀರ್ಣಿಸಿಕೊಂಡು ಅದರಿಂದ ನಮಗೆ ದೊರೆತಿರುವ ಸೂತ್ರಗಳು ಮತ್ತು ವಾಗ್ದಾನಗಳನ್ನು

ನಮ್ಮದಾಗಿಸಿಕೊಂಡು ಅದರ ಪ್ರೇರಣೆಯಿಂದ ನಾವು ನಂಬಿಕೆಯಿಂದ ನಡೆಯಲು ಸಾಧ್ಯವಾಗುತ್ತದೆ-Z '95, 92, 93 (ಖ 1798).

*** *** ***

ಮಾರ್ಚ್ 16

ನಾವಂತೂ ಕ್ರೈಸ್ತ ಸಹೋದರರನ್ನು ಪ್ರೀತಿಸುವವರಾಗಿರುವದರಿಂದ ಮರಣದಿಂದ ಪಾರಾಗಿ ಜೀವದಲ್ಲಿ ಸೇರಿದ್ದೇವೆಂಬದು ನಮಗೆ ಗೊತ್ತಾಗಿದೆ. ............. ನಾವೂ ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ.

-1ಯೋಹಾನ 3:14,16

ಸಹೋದರರಾಗಿರುವವರಿಗೆ ಕೊನೆಯ ಮತ್ತು ಕಠಿಣವಾದ ಪರೀಕ್ಷೆ ಸಹೋದರರನ್ನು ಪ್ರೀತಿಸುವುದಾಗಿದೆ. ಜ್ಞಾನ ಪ್ರಕಾಶಕ್ಕೆ ಬಂದು ತಮ್ಮನ್ನು ಎಲ್ಲಾ ರೀತಿಯಲ್ಲಿ ರಕ್ಷಿಸಿಕೊಂಡು ಎಚ್ಚರವಾಗಿದ್ದರೂ ಬಿದ್ದುಹೋಗುವ ಸಂಭವವುಂಟು. ಅನೇಕರು ಈ ಪರೀಕ್ಷೆಯಲ್ಲಿ ಬಿದ್ದುಹೋಗಿ ಕ್ರಿಸ್ತನ ರಾಜ್ಯವನ್ನು ಪ್ರವೇಶಿಸಲು ಅನರ್ಹರಾಗುವರು. ಯಾವ ಸಹೋದರನಾದರೂ ವಿಶೇಷವಾಗಿ ಬಲಹೀನನಾಗಿದ್ದು, ಎಡವುವ ಸಂದರ್ಭದಲ್ಲಿ ಕ್ರಿಸ್ತನ ನಿಜ ಸೈನಿಕ ಸಹೋದರನು ಅಂತಹವನನ್ನು ದೂಷಿಸದೆ - (ನಮ್ಮ ಸೇನಾಧಿಪತಿ ಮತ್ತು ಹಿರಿಯ ಸಹೋದರನಾದ ಕ್ರಿಸ್ತನು ಹಾಗೆ ಮಾಡಲಿಲ್ಲವಲ್ಲ - ) ಬದಲು ಅವನ ವಿಷಯದಲ್ಲಿ ಎಚ್ಚರಿಕೆ ವಹಿಸಿ ಅವನಿಗೆ ಸಹಾಯಮಾಡಿ ತಾನು ಹೇಗೆ ತನಗಿಂತ ಬಲಿಷ್ಠವಾದ ಸಹೋದರರ ಜೊತೆಯಲ್ಲಿ ಸಂತೋಷಿಸುವನೋ ಹಾಗೆಯೇ ಬಲಹೀನ ಸಹೋದರನನ್ನು ಪ್ರೀತಿಸಿ ಬಿದ್ದುಹೋಗದಂತೆ ನೋಡಿಕೊಳ್ಳಬೇಕು-Z '99, 88 (ಖ 2450).

*** *** ***

ಮಾರ್ಚ್ 17

ಅವನಿಂದ ಆ ತಲಾಂತು ತೆಗೆದು ಹತ್ತು ತಲಾಂತು ಇದ್ದವನಿಗೆ ಕೊಡಿರಿ. ಇದ್ದವರಿಗೆಲ್ಲಾ ಕೊಡಲ್ಪಡುವದು. ಅವರಿಗೆ ಮತ್ತೂ ಹೆಚ್ಚಾಗುವದು; ಇಲ್ಲದವನ ಕಡೆಯಿಂದ ಇದ್ದದ್ದೂ ತೆಗೆಯಲ್ಪಡುವದು. -ಮತ್ತಾಯ 25:28,29

ತಲಾಂತನ್ನು ಭೂಮಿಯಲ್ಲಿ ಬಚ್ಚಿಡುವ ಉದಾಹರಣೆಗೆ ಒಂದು ತಲಾಂತು ಪಡೆದಿರುವದನ್ನೇ ಯಾಕೆ ಆರಿಸಿಕೊಂಡಿದೆ? ಯಾಕಂದರೆ, ಸ್ವಲ್ಪವನ್ನು ಹೊಂದಿರುವವನಿಗೂ ಜವಾಬ್ದಾರಿ ಇದೆಯೆಂಬುದನ್ನು ತೋರಿಸುವದಕ್ಕಾಗಿ. ಕರ್ತನಿಗೆ ಪ್ರತಿಷ್ಠೆಪಡಿಸಿಕೊಂಡಿರುವ ಜನರು ತಿಳಿಯತಕ್ಕದ್ದೇನಂದರೆ, ಸ್ವಲ್ಪ ತಲಾಂತು ಅಂದರೆ, ಅವಕಾಶಗಳನ್ನು ಹೊಂದಿರುವವನಿಂದಲೂ ಕರ್ತನು

ಫಲವನ್ನು ನಿರೀಕ್ಷಿಸುತ್ತಾನೆ. ಅವನನ್ನು ಕರ್ತನು ತಪ್ಪಿತಸ್ತನೆಂದು ಪರಿಗಣಿಸದೆ ಅವನು ತನ್ನಲ್ಲಿರುವ ತಲಾಂತನ್ನು ತನ್ನ ಸಹೋದರರ ಸೇವೆಯಲ್ಲೂ ಹಾಗೂ ಕರ್ತನ ಸತ್ಯಕ್ಕಾಗಿ ವಿನಿಯೋಗಿಸುವದನ್ನು ನಿರೀಕ್ಷಿಸುವನು-Z '01, 59 (ಖ 2764).

*** *** ***

ಮಾರ್ಚ್ 18

ಆದದರಿಂದ ನೀವು ಮನಸ್ಸಿನ ನಡುವನ್ನು ಕಟ್ಟಿಕೊಂಡು ಸ್ವಸ್ತಚಿತ್ತರಾಗಿದ್ದು, ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ದೊರಕುವ ಭಾಗ್ಯದ ಮೇಲೆ ನಿಮ್ಮ ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡಿರಿ.
-1ಪೇತ್ರ 1:13

ನೀವು ನಿಮ್ಮ ಮನಸ್ಸಿನ ನಡುವನ್ನು ಕಟ್ಟಿಕೊಂಡು ಒಂದು ದೀರ್ಘ ಮತ್ತು ನಿಶ್ಚಲವಾದ ಕಾರ್ಯವನ್ನು ಮಾಡಲು ನಿರ್ಧರಿಸಿದ ನಂತರ ನೀವು ಸಂಯಮವಾಗಿದ್ದುಕೊಂಡು ಯಾವ ಉದ್ವೇಗಕ್ಕೂ ಒಳಗಾಗದೆ, ನಿಮ್ಮ ಎಲ್ಲಾ ಆತ್ಮೀಕ ಶಕ್ತಿಯನ್ನು ಒಂದೆ ಸಾರಿ ಉಪಯೋಗಿಸಿ, ಕಳಕೊಂಡು ನಂತರ ನಿಷ್ಕ್ರಿಯರಾಗಿ ಮತ್ತು ಎದೆಗುಂದಿದವರಾಗಬೇಡಿ. ನೀವು ಗಂಭೀರವಾಗಿ ಆಲೋಚಿಸಿ. ಮುಂದೆ ನೀವು ನಂಬಿಕೆಯಲ್ಲಿ ಶಿಕ್ಷಿತರಾಗಲು ಬರುವ ಪರೀಕ್ಷೆಗಳಲ್ಲಿ ಜಯಶಾಲಿಗಳಾಗುವದಕ್ಕೆ ನಿಮ್ಮನ್ನು ನೀವು ಸಿದ್ದಪಡಿಸಿಕೊಂಡು, ದೇವರು ಜಯಶಾಲಿಗಳಿಗೆ ಅನುಗ್ರಹಿಸುವ ಆಶೀರ್ವಾದವನ್ನು ನೀವು ಪಡೆಯಬೇಕು. ನಮ್ಮ ಮುಂದಿರುವ ಆಶೀರ್ವಾದವನ್ನು ಪಡೆಯಲು ನಾವು ಓಡುವ ಓಟವನ್ನು ಆತುರವಾಗಿಯೂ, ಗುರಿಗೊತ್ತಿಲ್ಲದವರ ಹಾಗೆ ಓಡದೆ, ತಾಳ್ಮೆಯಿಂದಲೂ ಮತ್ತು ಸಂಯಮದಿಂದಲೂ ಓಡಿ ಪಡೆಯಬೇಕು-Z '03, 54 (ಖ 3149).

*** *** ***

ಮಾರ್ಚ್ 19

ನೀವು ಮುಂಚೆ ಅಜ್ಞಾನಿಗಳಾಗಿದ್ದಾಗ ನಿಮಗಿದ್ದ ದುರಾಶೆಗಳನ್ನು ಅನುಸರಿಸಿ ನಡೆಯುವರಾಗಿರದೆ, ನಿಮ್ಮನ್ನು ಕರೆದಾತನು ಪರಿಶುದ್ದನಾಗಿರುವ ಪ್ರಕಾರವೇ ನೀವು ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ದರಾಗಿರಿ. -1ಪೇತ್ರ 1:14,15

ಕೆಲವು ಕ್ರೈಸ್ತರು, ದೇವರೇ ಎಲ್ಲವನ್ನು ನಮ್ಮಲ್ಲಿ ರೂಪಿಸುತ್ತಾನೆ, ನಾವು ನಮ್ಮನ್ನು ಆತನ ಕೈಯಲ್ಲಿ ಒಪ್ಪಿಸಿ ಸುಮ್ಮನಿದ್ದರೆ ಸಾಕು ಎಂಬ ತಪ್ಪು ಅಭಿಪ್ರಾಯವುಳ್ಳವರಾಗಿದ್ದಾರೆ. ಪೇತ್ರನು ಈ ಅರ್ಥದಲ್ಲಿ ಹೇಳಲಿಲ್ಲ. ನಮ್ಮನ್ನು ಆತನು ಪ್ರಬೋಧಿಸುವದೇನಂದರೆ, ದೇವರು ನಮಗೆ ಕೊಟ್ಟಿರುವ ಉಪದೇಶದಂತೆ ನಮ್ಮ ಒಳಗೂ, ಹೊರಗೂ ಕಾರ್ಯನಡೆಯಬೇಕಾಗಿದೆ. ದೇವರೆ ನಮ್ಮಲ್ಲಿ ಪವಾಡಗಳ ಮೂಲಕ ಕಾರ್ಯನಿರ್ವಹಿಸುತ್ತಾನೆ ಎಂಬುದಾಗಿ ತಿಳಿದುಕೊಂಡು ನಾವು ಏನನ್ನು ಮಾಡದೆ ಸುಮ್ಮನಿದ್ದರೆ,

ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ. ಈ ಸ್ಥಿತಿಯನ್ನು ಸೈತಾನನು ಉಪಯೋಗಿಸಿಕೊಂಡು ನಮ್ಮ ಕೈಕಾಲುಗಳನ್ನು ಕಟ್ಟಿಹಾಕಿ ನಮ್ಮನ್ನು ಕತ್ತಲೆಗೆ ತಳ್ಳಿಬಿಡುವನು. ಇದಕ್ಕೆ ನಾವು ಅವಕಾಶ ಕೊಡದೆ ನಮ್ಮ ನಮ್ಮ ರಕ್ಷಣೆಯನ್ನು ಹೊಂದಲು ಪ್ರಯಾಸಪಡುವುದು ಒಳ್ಳೇದು-Z '03, 55 (ಖ 3150).

*** *** ***

ಮಾರ್ಚ್ 20

ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ, ನಿಜವಾಗಿ ನನ್ನ ಶಿಷ್ಯರಾಗಿದ್ದು, ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು ಎಂದು ಹೇಳಿದನು.
-ಯೋಹಾನ 8:31,32

ದೈವ ಸತ್ಯವು ದೇವರು ಏರ್ಪಡಿಸಿರುವ ನಿರ್ಧಿಷ್ಟ ಮಾರ್ಗ. ಅಂದರೆ ಕರ್ತನು, ಅಪೋಸ್ತಲರು ಮತ್ತು ಪ್ರವಾದಿಗಳ ಮೂಲಕವಲ್ಲದೆ, ಬೇರೆ ಎಲ್ಲೂ ದೊರಕುವದಿಲ್ಲ. ನನ್ನ ವಾಕ್ಯದಲ್ಲಿ ನೆಲೆಗೊಂಡಿರುವದು ಅಂದರೆ, ದೈವ ಪ್ರೇರಣೆಯಿಂದ ಬರೆಯಲ್ಪಟ್ಟ ವಾಕ್ಯಗಳಲ್ಲಿ ಅಡಕವಾಗಿರುವ ಅನೇಕ ದೈವ ಬೋಧನೆಗಳಲ್ಲಿ ನಂಬಿಕೆಯಿಟ್ಟು ಅಧ್ಯಯನ ಮಾಡುವದು ಮತ್ತು ಅದರಲ್ಲಿ ಧ್ಯಾನಾಸಕ್ತರಾಗಿದ್ದು, ನಮ್ಮ ಗುಣವನ್ನು ಅದಕ್ಕನುಸಾರವಾಗಿ ಮಾರ್ಪಡಿಸಿಕೊಂಡು ನಡೆಯುವದಾಗಿದೆ. ಹೀಗೆ ನಾವು ದೇವರ ವಾಕ್ಯದಲ್ಲಿ ಮುಂದುವರಿಯುವದಾದರೆ, ನಾವು ಆತನ ಆಸಕ್ತಿಯುಳ್ಳ ಶಿಷ್ಯರಾಗಿ ಸತ್ಯವನ್ನು ತಿಳಿಕೊಳ್ಳುವೆವು ಮತ್ತು ಅದರಲ್ಲಿ ದೃಢ ನಂಬಿಕೆಯುಳ್ಳವರಾಗಿ ನಮ್ಮ ನಿರೀಕ್ಷೆಗೆ ಕಾರಣವೇನೆಂದು ಕೇಳುವವರಿಗೆ ಕಾರಣ ತಿಳಿಸುವವರಾಗುವೆವು. ಈ ನಂಬಿಕೆ ಒಂದೇ ಸಾರಿ ನಮಗೆ ವಹಿಸಲ್ಪಟ್ಟಿತು. ಹೀಗಿರುವಲ್ಲಿ ನಾವು ಒಳ್ಳೆ ಹೋರಾಟ ಮಾಡುವವರಾಗಿ ನಮ್ಮಲ್ಲಿರುವ ನಂಬಿಕೆಗೆ ಒಳ್ಳೆ ಸಾಕ್ಷಿಯನ್ನು ಕೊಟ್ಟು, ಹೋರಾಟದಲ್ಲಿ ನಮಗೆ ಸಂಭವಿಸುವ ಎಲ್ಲಾ ಕಷ್ಟಗಳನ್ನು ಕ್ರಿಸ್ತನ ನಿಜ ಸೈನಿಕರಾಗಿ ಎದುರಿಸಿ ಕೊನೆಯವರೆಗೂ ಹೋರಾಡುವವರಾಗಿರುವೆವು-Z '03, 61 (ಖ 3153).

*** *** ***

ಮಾರ್ಚ್ 21

ನಿಮ್ಮ ವೈರಿಗಳನ್ನು ಪ್ರೀತಿಸಿರಿ. ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ.
-ಮತ್ತಾಯ 5:44

ಇಲ್ಲಿ ನಿಮ್ಮನ್ನು ನೀವೆ ಅಂತವರ ಬಗ್ಗೆ ಪರೀಕ್ಷಿಸಿಕೊಳ್ಳುವದಕ್ಕೆ ಇದು ಒಂದು ನಿಜವಾದ ಮಾರ್ಗವಾಗಿದೆ. ತಪ್ಪಾಗಿ ನಡೆಯುವ ನನ್ನ ಸಂತೋಷದಿಂದ ಕರುಣೆ ತುಂಬಿದವನಾಗಿ ನಿಮ್ಮ ಸಾಮರ್ಥ್ಯತೆ ದೃಷ್ಟಿಯಿಂದ ನೋಡಿ ತಕ್ಕಂತೆ ಆ ತಪ್ಪನ್ನು ಮತ್ತು ಆ ತಪ್ಪಾದ ಮಾರ್ಗವನ್ನು ಬಿಟ್ಟು ನಡೆಯಲು ಸಹಾಯಮಾಡುವಿರೇನು? ಅಂಥವರ ಬಗ್ಗೆ ದೇವರಲ್ಲಿ ಪ್ರಾರ್ಥಿಸಿ ಅವರ ಬಲಹೀನತೆಯನ್ನು ಅವರ ಅಜ್ಞಾನವನ್ನು ಮತ್ತು ಅಭಿವೃದ್ದಿಯಾಗದಿರುವದನ್ನು ಸಂಯಮದಿಂದ ಸಹಿಸಿಕೊಂಡು ನೀವೇ ಅವರಿಗೆ ಮಾದರಿಯಾಗಿದ್ದು, ಆ ಅದ್ಭುತ ಕ್ರಿಸ್ತೀಯ ಮಾರ್ಗವನ್ನು ತೋರಿಸುವಿರೇನು? ಹಾಗಾಗುವದಾದರೆ, ನೀವು ಅವನಲ್ಲಿನ ಪಾಪವನ್ನು ನಿರಾಕರಿಸುವರೆ ವಿನಃ ಅವನನ್ನಲ್ಲ. ಎಲ್ಲಿಯವರೆಗೂ ಅಂದರೆ, ಪಾಪ ಮತ್ತು ಪಾಪಿಯು ಒಂದೇ ಅದು ಬೇರೆ ಬೇರೆಯಲ್ಲ ಎಂಬುದಾಗಿ ದೇವರು ತೀರ್ಮಾನಿಸುವಾಗ ನೀವು ಅವನಲ್ಲಿಟ್ಟಿದ್ದ ಪ್ರೀತಿಯನ್ನು ಹಿಂದೆಗೆದುಕೊಳ್ಳಬಹುದು-Z ’91, 141 (ಖ 1330).

***     ***     ***

ಮಾರ್ಚ್ 22

ನಮ್ಮನ್ನು ನಾವೇ ವಿಚಾರಿಸಿಕೊಂಡರೆ. ನ್ಯಾಯವಿಚಾರಣೆಗೊಳಗಾಗುವದಿಲ್ಲ. ಆದರೆ, ನಾವು ಕರ್ತನ ನ್ಯಾಯವಿಚಾರಣೆಗೆ ಒಳಗಾಗಿರಲಾಗಿ ಆತನು - ಇವರಿಗೆ ಲೋಕದವರ ಸಂಗಡ ಅಪರಾಧಿಗಳೆಂಬ ನಿರ್ಣಯವಾಗಬಾರದೆಂದು ನಮ್ಮನ್ನು ಶಿಕ್ಷಿಸುತ್ತಾನೆ.

-1ಕೊರಿಂಥ 11:31,32

ಕ್ರೈಸ್ತರಾದ ನಮಗೆ ನಮ್ಮ ಜೀವಿತ ಕಾಲದಲ್ಲಿ ಲಾಭ ನಷ್ಟಗಳು ಹೇಗೆ, ಯಾವಾಗ, ಎಲ್ಲಿ ಒದಗಿ ಬಂದವು ಎಂಬದನ್ನು ಮನದಟ್ಟು ಮಾಡಿಕೊಳ್ಳುವದು, ಅಂದರೆ ಕರ್ತನನ್ನು ಮೆಚ್ಚಿಸುವ ಒಂದೇ ದೃಷ್ಟಿಯಿಟ್ಟು ನಾವು ಸತತವಾಗಿ ಲೋಕ, ಸೈತಾನ ಮತ್ತು ಶರೀರದ ಇಚ್ಛೆಗಳ ವಿರುದ್ದ ಹೋರಾಟ ಮಾಡುವಾಗ ನಮಗೆ ಲಾಭ ನಷ್ಟದ ಬಗ್ಗೆ ಅನುಭವವಾಗುವದು. ಆತ್ಮೀಕ ಇಸ್ರಾಯೇಲ್ಯರು ಪ್ರತಿಗಳಿಗೆ ಪ್ರತಿದಿನ ಮಹಾಯಾಜಕನಿಗೆ ಹತ್ತಿರವಾಗಿದ್ದುಕೊಂಡು ಜೀವಿಸಬೇಕಾಗಿದೆ. ನಮ್ಮಲ್ಲಿನ ಮನಃಸ್ಸಾಕ್ಷಿಯು ಮತ್ತು ಮನಸ್ಸು ಕಲುಷಿತವಾದರೆ, ಅದನ್ನು ಶುದ್ದೀಕರಿಸಲು ನಾವು ತಕ್ಷಣ ಕ್ರಿಸ್ತನು ನಮ್ಮ ರಕ್ಷಣೆಗಾಗಿ ಸುರಿಸಿದ ರಕ್ತಕ್ಕೆ ಮೊರೆಹೋಗಬೇಕು. ಆಗ ಕ್ರಿಸ್ತನು ನಮಗೆ ಹೊದಿಸಿರುವ ನೀತಿ ವಸ್ತ್ರವನ್ನು ಶುಭ್ರವಾಗಿರುವ ಹಾಗೆ ನೋಡಿಕೊಳ್ಳಬಹುದು. ಹಾಗೂ ಅಲ್ಪಸ್ವಲ್ಪ ಕೊಳೆ ಉಳಿದಿದ್ದರೆ, ಅದನ್ನು ಕೂಡ ತೆಗೆದುಹಾಕಿ ಆ ನೀತಿವಸ್ತ್ರವನ್ನು ಶುಭ್ರವಾಗಿಟ್ಟುಕೊಳ್ಳಲು ಸಾಧ್ಯವಾಗುವುದು-Z ’03, 3, 4 (ಖ 3125).

***     ***     ***

ಮಾರ್ಚ್ 23

ಹೀಗಿರಲಾಗಿ ನೀವು ಜ್ಞಾನಪ್ರಕಾಶದಲ್ಲಿ ಸೇರಿ ಕಷ್ಟಾನುಭವವೆಂಬ ಬಲು ಹೋರಾಟವನ್ನು ಸಹಿಸಿಕೊಂಡ ಹಿಂದಿನ ದಿನಗಳನ್ನು ನೆನಪಿಗೆ ತಂದುಕೊಳ್ಳಿರಿ; ಕೆಲವು ಸಾರಿ ನೀವು ನಿಂದೆಗಳನ್ನೂ, ಸಂಕಟಗಳನ್ನೂ ಅನುಭವಿಸಿ ಹಾಸ್ಯಕ್ಕೆ ಗುರಿಯಾದಿರಿ; ಕೆಲವು ಸಾರಿ ಅಂಥವುಗಳನ್ನು ಅನುಭವಿಸಿದವರಲ್ಲಿ ಸೇರಿದವರಾಗಿದ್ದು ಕಷ್ಟಾನುಭವಿಗಳಾದಿರಿ.

-ಇಬ್ರಿಯ 10:32,33

ಸತ್ಯದಲ್ಲಿ ಬಲಶಾಲಿಗಳಾಗಿರುವ ಸಹೋದರರು ಇತರರಿಂದ ಸಹಾಯ ಮತ್ತು ಉತ್ತೇಜನವನ್ನು ಕೆಲವು ಸಂದರ್ಭಗಳಲ್ಲಿ ಪಡೆಯಬೇಕಾಗಿರುತ್ತದೆ. ನಾವು ನಮ್ಮ ಮಟ್ಟಿಗೆ ಎಲ್ಲಾದರಲ್ಲೂ ಸ್ವಯಂತೃಪ್ತರಾಗಿದ್ದೇವೆ ಎಂದು ಭಾವಿಸಲಾಗದು. ಯಾಕಂದರೆ, ಕರ್ತನು ಮಾಡಿರುವಂತ ಏರ್ಪಾಡು ಇದಕ್ಕೆ ಅವಕಾಶ ಕಲ್ಪಿಸುವುದಿಲ್ಲ. ಜೊತೆಗೆ ನಾವು ಕರ್ತನನ್ನು ಆತುಕೊಂಡಿದ್ದಾಗ್ಯೂ ನಮ್ಮ ಜೊತೆಗಾರರ ಪ್ರೀತಿ ಸಹಕಾರ ಮತ್ತು ಉತ್ತೇಜನ ಕರ್ತನ ದ್ರಾಕ್ಷೆ ತೋಟದಲ್ಲಿ ಕಾರ್ಯನಿರ್ವಹಿಸುವದಕ್ಕೆ ಅವಶ್ಯವಿದೆ. ಯಾರು ಸುವಾರ್ತ ಸೇವೆಯನ್ನು ನಿರ್ವಹಿಸುವ ಪ್ರಮಾಣ ಅದರ ತೀವ್ರತೆ ಮತ್ತು ಅದರ ತೀಕ್ಷಣತೆಯನ್ನು ತಿಳುಕೊಂಡಿರುವರೊ ಅವರು ಅನುಕಂಪ ತೋರಿಸದೆ ಇರುವರೇ? ಇಲ್ಲಿ ಕರ್ತನ ಬಹುಮಂದಿ ಸೇವಕರು ಹೆಚ್ಚಿನ ತಲಾಂತು ಅಥವಾ ಅವಕಾಶಗಳನ್ನು ದೇವರ ಸೇವೆಯಲ್ಲಿ ಹೊಂದದೆ ಇದ್ದರೂ ಅವರು ಇತರರ ಸಂಗಡ ಜೊತೆಯಾಗಿದ್ದು ಅವರಿಗೆ ಎಲ್ಲಾ ರೀತಿಯಲ್ಲೂ ಸಹಕಾರ ನೀಡಿ ಬೆಂಬಲವಾಗಿದ್ದು ಸುವಾರ್ತ ಸೇವೆಯನ್ನು ಮಾಡುವರು-Z ’03, 40 (ಖ 3143).

***   ***   ***

ಮಾರ್ಚ್ 24

ನಾನು ನಿನ್ನನ್ನು ಎಂದಿಗೂ ಕೈಬಿಡುವುದಿಲ್ಲ, ಎಂದಿಗೂ ತೊರೆಯುವುದಿಲ್ಲ.

-ಇಬ್ರಿಯ 13:5

ಮನುಷ್ಯನು ಏನು ಮಾಡುವನೋ ಎಂದು ನಾವು ಹೆದರುವುದೇಕೆ? ಅಥವಾ ದೇವರ ಕಾರ್ಯವನ್ನು ಸೈತಾನ ಅಥವಾ ಬೇರೆ ಯಾವ ದುಷ್ಟ ಶಕ್ತಿಯು ಅದಕ್ಕೆ ವಿರುದ್ಧವಾಗಿ ನಿಂತು ನಾವು ಮಾಡುವ ಕಾರ್ಯವನ್ನು ತಡೆಯುತ್ತಿದ್ದಾರಲ್ಲ ಎಂದು ವ್ಯಥೆಪಡುವುದೇಕೆ? ಬದಲು ನಾವು ದೇವರ ಕಾರ್ಯ ಮಾಡಲು ಉತ್ಸುಕರಾಗಿದ್ದು, ಗಂಭೀರತೆಯಿಂದಲೂ ಮತ್ತು ಎಚ್ಚರಿಕೆಯಿಂದಲೂ ಮುಂದುವರೆಸಿಕೊಂಡು ಎಲ್ಲಾ ಜವಾಬ್ದಾರಿ ನಮ್ಮ ಮೇಲೆ ಇದೆ ಎಂದೆಣಿಸಿ ಹೃದಯದಲ್ಲಿ ನಮ್ಮ ಕರ್ತನು ಈ ಜವಾಬ್ದಾರಿಯ ಎಲ್ಲಾ ಭಾರವನ್ನು ತಾನೆ ಹೊರುತ್ತಿರುವನು ಎಂಬದಾಗಿ ಪರಿಗಣಿಸಬೇಕು. ಬಹಳ ಹಿಂದೆ ಯಾರೋ ಒಬ್ಬ ವ್ಯಕ್ತಿ ಹೇಳಿದ್ದೇನಂದರೆ, “ನನ್ನ ಕಾರ್ಯ ಮುಗಿಸುವವರೆಗೂ ನಾನು

ಅಮರನಾಗಿರುವೆನು.”  ಇದು ಕರ್ತನ ಸೇವೆಯಲ್ಲಿ ನಿರತರಾಗಿರುವ ಎಲ್ಲರಿಗೂ ಅನ್ವಯಿಸುತ್ತದೆ. ಯಾಕಂದರೆ, ಕರ್ತನು ತನ್ನ ಭಕ್ತರ ಮರಣವನ್ನು ಅಲ್ಪವೆಂದೆಣಿಸುವದಿಲ್ಲ-Z ’03, 41 (ಖ 3144).

***  ***  ***

ಮಾರ್ಚ್ 25

ಆದಕಾರಣ ಪ್ರಿಯರೇ, ನೀವು ಈ ಸಂಗತಿಗಳನ್ನು ಮುಂದಾಗಿ ತಿಳಿದುಕೊಂಡಿರುವುದರಿಂದ ಅಧರ್ಮಿಗಳ ಭ್ರಾಂತಿಯ ಸೆಳೆವಿಗೆ ಸಿಕ್ಕಿಕೊಂಡು ನಿಮ್ಮ ಸ್ಥಿರ ಮನಸ್ಸನ್ನು ಬಿಟ್ಟು ಭ್ರಷ್ಟರಾಗದಂತೆ ಎಚ್ಚರಿಕೆಯಾಗಿರಿ.  ನೀವು ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತಾ ಇರ್ರಿ.

-2 ಪೇತ್ರ 3:17,18

ದೇವರ ವಾಗ್ದಾನಗಳನ್ನು ನಂಬಿರುವ ನಾವು ದೈವ ಜ್ಞಾನದಲ್ಲಿ ಬೆಳೆದು ಈ ವಾಗ್ದಾನಗಳನ್ನು ನಂಬಿಕೆಯಿಂದ ನಮಗೆ ಅನ್ವಯಿಸಿಕೊಂಡಾಗ ಈ ವಾಗ್ದಾನಗಳು ನಮಗಾಗಿ ಮಾಡಲ್ಪಟಿದೆ ಮತ್ತು ನಮ್ಮ ಜೀವನದಲ್ಲಿ ಅವುಗಳು ನೆರವೇರುತ್ತಿವೆ ಎಂಬುದನ್ನು ತಿಳಿಯುವದರಿಂದ ನಾವು ಜ್ಞಾನದ ಜೊತೆಯಲ್ಲಿ ನೀತಿಗುಣಗಳನ್ನು ವರ್ಧಿಸುವದಕ್ಕೆ ಸಾಧ್ಯವಾಗುವುದು.  ಜ್ಞಾನದ ಪ್ರತಿಯೊಂದು ಅಂಶವನ್ನು ಒಳ್ಳೆಯ ಮತ್ತು ಪ್ರಾಮಾಣಿಕ ಹೃದಯದಲ್ಲಿ ಅಂಗೀಕರಿಸುವುದರ ಫಲವಾಗಿ ನಾವು ವಿಧೇಯತ್ವವನ್ನು, ನೀತಿಯ ಗುಣಗಳನ್ನು ಮತ್ತು ಜ್ಞಾನದಲ್ಲಿ ಮುಂದಿನ ಹೆಜ್ಜೆಯಿಡಲು ಸಾಧ್ಯವಾಗುತ್ತೆ.  ಇಲ್ಲದ ಪಕ್ಷಕ್ಕೆ ನಾವು ಭ್ರಷ್ಟರಾಗುತ್ತೇವೆ.  ಹೀಗೆ ಜ್ಞಾನವನ್ನು ಕಳಕೊಳ್ಳುವುದಾದರೆ, ಅದೇ ಪ್ರಮಾಣದಲ್ಲಿ ಸದ್ಗುಣಗಳನ್ನು ಕಳಕೊಂಡು ಕತ್ತಲೆಗೆ ತಳ್ಳಲ್ಪಡುತ್ತೇವೆ.  ನಂತರ ಕರ್ತನ ವಾಗ್ದಾನಗಳು ನಮಗೆ ಮಂಕು ಮಂಕಾಗಿ ಗೋಚರಿಸಲು ಪ್ರಾರಂಭವಾಗಿ ಅಷ್ಟೇ ಪ್ರಮಾಣದಲ್ಲಿ ನಮ್ಮ ನಡತೆ ಮತ್ತು ನೀತಿಯೂ ಪ್ರಾಪಂಚಿಕತೆ ಮತ್ತು ಪಾಪದ ವಶಕ್ಕೆ ಒಪ್ಪಿಸಲ್ಪಟ್ಟು ಎಲ್ಲವನ್ನೂ ಕಳಕೊಳ್ಳುತ್ತೇವೆ-Z ’03, 70 (ಖ 3156).

***  ***  ***

ಮಾರ್ಚ್ 26

ನಾವು ರಾತ್ರಿಯವರೂ ಅಲ್ಲ; ಕತ್ತಲೆಯವರೂ ಅಲ್ಲ.  ಆದಕಾರಣ ನಾವು ಇತರರಂತೆ ನಿದ್ದೆ ಮಾಡದೆ ಎಚ್ಚರವಾಗಿರೋಣ.  -1ಥೆಸಲೋನಿಕ 5:5,6

ಕ್ರೈಸ್ತನಾಗಿದ್ದು ಕ್ರಿಸ್ತನ ಶಾಲೆಯಲ್ಲಿ ಶಿಷ್ಯನಾಗಿರುವವನು ಕ್ರಿಸ್ತನ 1,000 ವರ್ಷದ ರಾಜ್ಯದಲ್ಲಿ ಪಾಲಹೊಂದಲು ನೇಮಿಸಲ್ಪಟ್ಟಿರುವನು.  ಆಶ್ಚರ್ಯಕರವಾದ ಆಶೀರ್ವಾದ ಹಾಗೂ ಬಹುಮಾನಗಳನ್ನು ಪಡೆಯುವನು.  ಹೀಗಿರುವಲ್ಲಿ ದೈವೋಕ್ತಿಗಳಲ್ಲಿ ಎಚ್ಚರಿಸುವ ಮಾತುಗಳು ಇರುವುದು ವಾಸ್ತವ.  ಇದರಿಂದ ದೇವ ಜನರು ಯಾವಾಗಲೂ ಎಚ್ಚರಿಕೆಯಿಂದಿರಲು ಸಾಧ್ಯ.  ಅವರು ಇತರರಂತೆ ನಿದ್ದೆಹೋಗುವವರಲ್ಲ, ಇತರರಂತೆ ಸೋಮಾರಿಗಳಲ್ಲ, ಇತರರಂತೆ ಪ್ರಪಂಚದ ಚಿಂತೆಗಳಲ್ಲಿ ಸಿಕ್ಕಿಕೊಂಡವರಲ್ಲ.  ಆದರೆ ಇವರು

ಎಚ್ಚರವಾಗಿದ್ದು ಕರ್ತನ ಸೇವೆ ಮಾಡುವವರಾಗಿದ್ದಾರೆ. ಪ್ರಾಥಮಿಕವಾಗಿ ಈ ಸೇವೆಯು ತಮ್ಮನ್ನು ತಾವೇ ಕರ್ತನ ಸಾಮಿಪ್ಯಕ್ಕೆ ತಂದುಕೊಂಡು ಆತನ ಚಿತ್ತಕ್ಕೆ ಒಳಪಡಿಸಿಕೊಂಡು ಕರ್ತನ ಸಾರೂಪ್ಯವನ್ನು ಪಡೆಯುವದಾಗಿದೆ. ಮತ್ತು ಎರಡನೆಯದಾಗಿ ತಾವೇ ಕರ್ತನಂತೆ ನಡೆದು ಇತರರಿಗೆ ಮಾದರಿಯಾಗಿದ್ದು ಅವರೂ ಈ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯಲು ಸಹಾಯ ಮಾಡುವರು-Z '03, 70 (ಖ 3155).

*** *** ***

ಮಾರ್ಚ್ 27

ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ, ನಾನು ನಿನ್ನಲ್ಲಿಯೂ ಇರುವ ಪ್ರಕಾರ ........ ಅವರ ಐಕ್ಯವು ಪೂರ್ಣಸಿದ್ಧಿಗೆ ಬರುವುದರಿಂದ ...... ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದೀ ಎಂದು ಲೋಕಕ್ಕೆ ತಿಳಿದು ಬರುವದು.

-ಯೋಹಾನ 17:20-23

ನಾವು ಆಶ್ಚರ್ಯ ಚಕಿತರಾಗಿ ಕೇಳುವ ಪ್ರಶ್ನೆ ಅಂದರೆ, ಇದು ಹೇಗೆ ಸಾಧ್ಯ? ನಮ್ಮ ಕರ್ತನಾದ ಯೇಸುಸ್ವಾಮಿಯವರು ಸದಾ ತಂದೆಯ ಬಳಿಯಲ್ಲಿದ್ದು, ತಂದೆಯೊಂದಿಗೆ ಪರಿಪೂರ್ಣ ಹೊಂದಾಣಿಕೆಯಾಗಿದ್ದು, ತಂದೆಯ ಗುಣಲಕ್ಷಣಗಳನ್ನು ಪ್ರತಿಬಿಂಬಿಸುವವರಾಗಿದ್ದಾರೆ. ಆದರೆ, ನಮ್ಮಲ್ಲಿ ಹಾಗಿಲ್ಲವಲ್ಲ. ನಾವು ಪಾಪಿಗಳು ನಮ್ಮನ್ನು ದೇವರು ಕರ್ತನನ್ನು ಪ್ರೀತಿಸಿದಂತೆ ಪ್ರೀತಿಸಲು ನಮ್ಮಲ್ಲಿ ಯಾವ ಯೋಗ್ಯತೆಯೂ ಇಲ್ಲ. ಹೌದು ನಿಜವೆ, ಆದರೂ ನಾವು ಶುದ್ಧೀಕರಿಸಲ್ಪಟ್ಟಿದ್ದೇವೆ. ನಮ್ಮ ಈ ಮಣ್ಣಿನ ದೇಹವು ಎಷ್ಟೇ ಅಪರಿಪೂರ್ಣ ಸ್ಥಿತಿಯಲ್ಲಿದ್ದರೂ ಮತ್ತು ಆ ಸ್ಥಿತಿಯಲ್ಲೇ ಮುಂದುವರೆದರೂ. ನಮ್ಮ ಹೃದಯವು ಆತನ ದೃಷ್ಟಿಯಲ್ಲಿ ಪರಿಪೂರ್ಣವಾಗಿದೆ. ಏಕೆಂದರೆ, ಕರ್ತನು ನಮ್ಮ ಹೃದಯಗಳನ್ನು ನೋಡುತ್ತಾನೆ. ಹೀಗೆ ಕರ್ತನು ನಮ್ಮ ಹೃದಯವು ಪರಿಪೂರ್ಣವಾಗಿರುವದನ್ನು ಮತ್ತು ನಮ್ಮ ಉದ್ದೇಶ ಮತ್ತು ಇಚ್ಛೆ ನಮ್ಮ ಶರೀರದಲ್ಲಿನ ಬಲಹೀನತೆ ಮತ್ತು ಅಶಕ್ತತೆಯನ್ನು ಜಯಿಸಲು ನಾವು ಎಷ್ಟೋ ನೋವುಂಟುಮಾಡುವ ತೀರ್ಮಾನವನ್ನು ತೆಗೆದುಕೊಂಡು ಆತನ ಚಿತ್ತವನ್ನು ಹೃದಯಪೂರ್ವಕವಾಗಿ ನೆರವೇರಿಸಲು ಮಾಡುವ ಶತಪ್ರಯತ್ನವನ್ನು ದೇವರು ಪರಿಗಣಿಸುತ್ತಾನೆ. ಇದರೊಂದಿಗೆ ನಾವು ಬಿದ್ದುಹೋಗಿರುವ ಸಲುವಾಗಿ ಏರ್ಪಡಿಸಿರುವ ವಿಮೋಚನೆಯಲ್ಲಿ ನಮ್ಮನ್ನು ನಾವು ತಗ್ಗಿಸಿಕೊಂಡು ನಂಬಿಕೆಯನ್ನಿಟ್ಟು ಆತನ ಚಿತ್ತವನ್ನು ನೆರವೇರಿಸಲು ಮಾಡುವ ಸಾಧನೆಯನ್ನು ಪ್ರಯತ್ನವನ್ನು ಪರಿಗಣಿಸುವುದರಿಂದ ಆತನ ಪ್ರೀತಿಗೆ ನಾವು ಪಾತ್ರರಾಗುತ್ತೇವೆ-Z '03, 79 (ಖ 3160).

*** *** ***

ಮಾರ್ಚ್ 28

ಕ್ರಿಸ್ತ ಯೇಸುವಿನ ಒಳ್ಳೇ ಸೈನಿಕನಂತೆ ನನ್ನೊಂದಿಗೆ ಶ್ರಮೆಯನ್ನನುಭವಿಸು.

-2ತಿಮೋಥೆ 2:3

ನಿಜ ಸೈನಿಕನು ತಾನು ಏಕೆ ಸೈನಿಕನಾಗಿದ್ದೇನೆ ಎಂಬುದರ ಬಗ್ಗೆ ಚರ್ಚಿಸುವದಿಲ್ಲ. ತಾನು ಸೈನಿಕನಾಗುವ ಮೊದಲೆ ಅದು ನ್ಯಾಯ ಮತ್ತು ನೀತಿಗನುಸಾರವಾಗಿದೆ ಎಂಬದನ್ನು ತೀರ್ಮಾನಿಸಿರುವನು.

ನಂತರ ಇದಕ್ಕೆ ವಿರುದ್ಧವಾಗಿ ಬರುವ ಉಪದ್ರವಗಳನ್ನು ತಳ್ಳಿಹಾಕಿ ತಾನು ಸೈನಿಕನಾಗಿರುವದನ್ನು ಸಮರ್ಥಿಸುತ್ತಾನೆ. ಈ ನಿಲುವಿಗಾಗಿ ತನ್ನ ಎಲ್ಲವನ್ನು ವ್ಯಯ ಮಾಡಲಿಕ್ಕೂ ಹಿಂಜರಿಯುವುದಿಲ್ಲ. ಕ್ರಿಸ್ತನ ಸೇವೆಯನ್ನು ಪ್ರಮಾಣಿಕವಾಗಿಯು ದೃಢ ವಿಶ್ವಾಸದಿಂದ ಮಾಡುವುದು ಮಹಿಮೆ ತರುವ ಕಾರ್ಯ ಎಂಬುದಾಗಿ ಪರಿಗಣಿಸುವನು. ಈ ಸೇವೆಯಲ್ಲಿ ಕ್ರಿಸ್ತನ ಪರವಾಗಿ ಹೋರಾಡುವುದರಲ್ಲಿ ವರ್ಣನಾತೀತ ಸಂತೋಷವಿದೆ ಎಂಬುದಾಗಿ ತಿಳಿದು ಕಾರ್ಗತ್ತಲಿನ ಕಣಿವೆಯಲ್ಲಿ ಸಾಯುವಂತ ಸ್ಥಿತಿ ಬರುತ್ತದೆ ಎಂಬುದಾಗಿ ತಿಳಿದನು, ಹಾಗೂ ರಾಜಾಧಿರಾಜನ ಸಂತೋಷ ಮತ್ತು ಶಾಶ್ವತ ಸಮಾಧಾನದಲ್ಲಿ ಸೇರಲು ಯಥೇಚ್ಛವಾದ ಅವಕಾಶವಿದೆ ಎಂಬುವ ನಿರೀಕ್ಷೆಯಿರುವದರಿಂದ ಎದೆಗುಂದದೆ ಹೋರಾಡುವನು. ಇಂತಹ ನಿರೀಕ್ಷೆ ನಮ್ಮ ಮುಂದೆ ಇರುವದರಿಂದ ಈ ಬಲಯುತ ಹೋರಾಟಮಾಡಲು ಧೈರ್ಯಗೆಡದೆ ಮತ್ತು ವೈರಿಯ ಉಗ್ರತೆ, ಹಸಿವು, ಬಾಯಾರಿಕೆ, ವಸ್ತ್ರವಿಲ್ಲದಿರುವುದೋ, ಹಿಂಸೆ ಬಾಧೆಗಳು ಕೊನೆಗೆ ಮರಣವನ್ನು ಮೀರಿ ನಡೆಯುವವನಾಗಿರುವನು-Z ’03, 84 (ಖ 3162).

***　***　***

ಮಾರ್ಚ್ 29

ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ. ಅದು ದೇವರ ವರವೇ. -ಎಫೆಸ 2:8

ಬಿದ್ದು ಹೋಗಿರುವ ಮಾನವರಾದ ನಾವು ನಮ್ಮ ಪರಿಶುದ್ಧ ದೇವರು ಮೆಚ್ಚುವಂತ ಕಾರ್ಯವನ್ನು ಮಾಡಲು ಸಾಧ್ಯವಿಲ್ಲ. ನಾವು ಕ್ರೈಸ್ತರಾಗಿ ದೇವರ ಮುಂದೆ ನಿಂತಿರುವುದು ನಮ್ಮ ಹಳೆ ಸ್ವಭಾವ ಮಾಡಿದ ಅಥವಾ ಮಾಡುವ ಯಾವ ಕೃತ್ಯದಿಂದಲೂ ಅಲ್ಲ. ಅದು ನಮ್ಮಿಂದುಂಟಾದುದಲ್ಲ. ಅದು ದೇವರ ವರವೇ; ಈ ಪಾಠವನ್ನು ನಾವು ಯಾವಾಗಲೂ ಮರೆಯದೆ ಜ್ಞಾಪಕದಲ್ಲಿ ಇಟ್ಟಿರಬೇಕು. ಇಲ್ಲದ ಪಕ್ಷಕ್ಕೆ ನಾವು ನಮ್ಮ ಈಗಿನ ನಿಲುವಿನಿಂದ ಬಿದ್ದು ಹೋಗುವ ಅಪಾಯವಿದೆ. ನೂತನ ಮನಸ್ಸು, ನೂತನ ಹೃದಯ ನಮ್ಮ ಹಳೆಯ ಸ್ವಭಾವದಿಂದ ಉತ್ಪತ್ತಿಯಾಗಿಲ್ಲ. ಅಪೋಸ್ತಲನು ಹೇಳುವಂತೆ ಅದು ಹೊಸ ಮತ್ತು ಪ್ರತ್ಯೇಕ ಸೃಷ್ಟಿಯಾಗಿದೆ. ನಾವು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿ ಸೃಷ್ಟಿಸಲ್ಪಟ್ಟಿದ್ದೇವೆ. ಅದು ದೇವರ ಕಾರ್ಯವಾಗಿದೆ. ಒಳ್ಳೆ ಕೆಲಸಗಳನ್ನು ಮಾಡಲಿಕ್ಕೆ, ಆದರೆ ಒಳ್ಳೆ ಕೆಲಸದಿಂದಲ್ಲ-Z ’03, 90 (ಖ 3166).

***　***　***

ಮಾರ್ಚ್ 30

ಇವೆಲ್ಲವುಗಳು ಹೀಗೆ ಲಯವಾಗಿ ಹೋಗುವದರಿಂದ ನೀವು ............ ಎಷ್ಟೋ ಪರಿಶುದ್ಧವಾದ ನಡವಳಿಕೆಯೂ, ಭಕ್ತಿಯೂ ಉಳ್ಳವರಾಗಿರಬೇಕಲ್ಲಾ. -2ಪೇತ್ರ 3:11

ಪರಿಶುದ್ಧತೆಯಲ್ಲಿ ಅಥವಾ ದೇವರ ಸಾರೂಪ್ಯದಲ್ಲಿ, ಇತರರನ್ನು ನೋಯಿಸುವದಾಗಲಿ, ಹರಟೆಕೊಚ್ಚುವದಾಗಲಿ, ಕೆಟ್ಟ ಅಥವ ಅಶುದ್ಧ ಮಾತುಗಳಾಗಲಿ, ಅಪ್ರಮಾಣಿಕ ಹಾಗೂ ಕಟುಕರವಾದ ಮಾತುಗಳನ್ನಾಡುವದಾಗಲಿ ಪರಿಶುದ್ಧತೆಯಲ್ಲಿ ಸೇರಿಲ್ಲ. ಕ್ರಿಸ್ತನ ಹೆಸರನ್ನು ಸತ್ಯನಿಷ್ಠರಾಗಿ ಪ್ರಾಮಾಣಿಕವಾಗಿ ಹೇಳಿಕೊಳ್ಳುವ ಯಾವನಾದರು ಇವೆಲ್ಲವುಗಳಿಂದ ದೂರವಿರಬೇಕು. ಹೀಗಿರುವಲ್ಲಿ ನಾವು ಮರೆಯದೆ ನಮ್ಮ ದಿನಚರಿಯ ವರದಿಯನ್ನು ಕರ್ತನಿಗೆ ಒಪ್ಪಿಸುವಾಗ ನಿರುಪಯುಕ್ತವಾದ ಮಾನಸಾಂತರಪಡದ. ಅದರಿಂದ ಕ್ಷಮಾಪಣೆಗೆ ಅನರ್ಹರಾಗುವಂತ ಯಾವ ವಿಷಯಗಳು ನಮ್ಮ ವಿರುದ್ಧ ನಿಲ್ಲದಂತೆ ನೋಡಿಕೊಳ್ಳಬೇಕು. ಹೀಗೆ ನಾವು ಪ್ರತಿನಿತ್ಯವು ನಮ್ಮ ಲೆಕ್ಕವನ್ನು ದೇವರಿಗೆ ಒಪ್ಪಿಸಿ ಇವೆಲ್ಲವುಗಳಿಂದ ಜಯಶಾಲಿಗಳಾಗಲು ಆತನಿಂದ ಅನುಗ್ರಹವಾಗಿ ಹೊಂದಿರುವ ಕೃಪೆ ನಮ್ಮಲ್ಲಿ ನೆಲೆಗೊಂಡಿರುವದರಿಂದ ನಾವು ನ್ಯಾಯವಿಚಾರಣೆಗೆ ಒಳಗಾಗದೆ ದೇವರ ಮುಂದೆಯು ಕ್ರಿಸ್ತನ ಮುಂದೆಯು ಆತನು ದಯಪಾಲಿಸಿರುವ ಪವಿತ್ರಾತ್ಮನ ಸಹಾಯದಿಂದ ಇವೆಲ್ಲವುಗಳನ್ನು ಜಯಿಸಿ ಆತನ ಮೆಚ್ಚುಗೆಗೂ ಮತ್ತು ಆತನ ಅನುಮೋದನೆಗೂ ಪಾತ್ರರಾಗುವೆವು-Z ’96, 33 (ಖ 1937).

*** *** ***

ಮಾರ್ಚ್ 31

ಕ್ರಿಸ್ತನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟವನ್ನು ಮಾಡು. ನಿತ್ಯ ಜೀವವನ್ನು ಹಿಡಿದುಕೋ. ಅದಕ್ಕಾಗಿ ದೇವರು ನಿನ್ನನ್ನು ಕರೆದನು ಮತ್ತು ನೀನು ಅನೇಕ ಸಾಕ್ಷಿಗಳ ಮುಂದೆ ಒಳ್ಳೇ ಪ್ರತಿಜ್ಞೆಯನ್ನು ಮಾಡಿದಿಯಲ್ಲಾ. -1ತಿಮೋಥಿ 6:12

ನಮ್ಮ ಹೋರಾಟ ಸಾರ್ವಜನಿಕವಾಗಿರಬಹುದು ಅಥವಾ ವೈಯಕ್ತಿಕವಾಗಿರಬಹುದು. ಆದರೂ ಹೋರಾಡಲೇಬೇಕು. ಇದಕ್ಕಿಂತ ಹೆಚ್ಚಾಗಿ ಅದು ಮುನ್ನಡೆಯುವಂತದ್ದು ಮತ್ತು ಜಯಭೇರಿ ಹೊಡೆಯುವಂತದ್ದಾಗಿರಬೇಕು. ಅಲ್ಲದ ಪಕ್ಷಕ್ಕೆ ನಮ್ಮನ್ನು ಜಯಶಾಲಿಗಳೆಂದು ಕರ್ತನು ಅನುಮೋದಿಸುವದಿಲ್ಲ. ಇನ್ನೊಂದು ವಿಷಯವನ್ನು ನಾವು ಮನಸ್ಸಿನಲ್ಲಿಡುವುದು ಅವಶ್ಯ ಕರ್ತನು ನಾವು ಹೋರಾಟ ಮಾಡಲು ತೋರಿದಂತ ಆತ್ಮ ವಿಶ್ವಾಸವನ್ನು ಗಣನೆಗೆ ತೆಗೆದುಕೊಳ್ಳುತ್ತಾನೆಯೇ ಹೊರತು ನಾವು ಪಟ್ಟ ಪರಿಶ್ರಮದಿಂದಾದ ಪರಿಣಾಮವನ್ನಲ್ಲ. ಹೀಗಿರುವದರಿಂದ ನಾವು ಶಕ್ತಿಯಿಂದ ಮಾಡುವ ಕಾರ್ಯವನ್ನು ಕರ್ತನು ನೋಡುವುದಲ್ಲದೆ, ನಾವು ಕರ್ತನಿಗೆ ಸಮರ್ಪಿಸುವ ಯಜ್ಞ ಮತ್ತು ಕೊಡುಗೆ ಅದು ಪ್ರೀತಿಪೂರ್ವಕವಾಗಿಯೂ ಭಕ್ತಿಯಿಂದ ಕೂಡಿರುವದಾಗಿಯೂ ಇರುವುದನ್ನು ಕರ್ತನು ಪರಿಗಣಿಸಿ ಅನುಮೋದಿಸುತ್ತಾನೆ. ನಾವು ಆತನಿಗಾಗಿಯೂ ಆತನಲ್ಲಿ ನಾವಿಟ್ಟಿರುವ ಪ್ರೀತಿಯಿಂದಾಗಿದೆಯೇ ಹೊರತು ಒಣ ಹೆಮ್ಮೆಯಿಂದಲ್ಲ-Z ’03, 91 (ಖ 3166).

*** *** ***